# ಒಂದು ರಾತ್ರಿ

ಪ್ರವೀಣ ಶಾನಭಾಗ
ಕಲೆ: ಸಂತೋಷ್ ಸಸಿಹಿತ್ಲು

ನಮಸ್ಕಾರ, ನನ್ನ ಹೆಸರು ವರುಣ. ನಾನು ಕಥೆ–ಕಾದಂಬರಿಗಳನ್ನು ಬರೆಯುವ, ಕವನಗಳ ಕಡೆಗೂ ಕೈ ಹಾಕುವ, ಇಪ್ಪತ್ತೆಂಟರ ಉತ್ಸಾಹಿ ಯುವಕ! ನನ್ನ ವೃತ್ತಿ ಕಾದಂಬರಿ ಬರೆಯೋದೇ. ಪ್ರವೃತ್ತಿ ಅಂತ ಏನನ್ನೂ ಪಕ್ಕದಲ್ಲಿಟ್ಟುಕೊಂಡಿಲ್ಲ ಬಿಡಿ. ಹೊಟ್ಟೆ ಬಿರಿಯುವಷ್ಟು ಹಿಟ್ಟನ್ನು ಹುಟ್ಟಿಸಿದವ ಸಂಪಾದಿಸಿಟ್ಟಿರುವುದರಿಂದ ಬರವಣಿಗೆ ವೃತ್ತಿಯಾಯಿತು. ಇಲ್ಲದಿದ್ದರೆ ಇಷ್ಟೊತ್ತಿಗೆ ಕೈಯಲ್ಲಿ ಮೌಸೋ ಅಥವಾ ಕತ್ತಿಗೆ ಸ್ಟೆತಾಸ್ಕೋಪೋ ಇರ್ತಿತ್ತು. ಒಂದಂತು ಸತ್ಯ. ಯಾರೂ ಯಾವುದನ್ನೂ ಸುಮ್ಮನೆ ಮಾಡಲ್ಲ. ಅದರ ಹಿಂದೆ ಬಲವಿಲ್ಲದಿದ್ದರೂ ಸಾಧಾರಣವಾದ ಕಾರಣವಂತೂ ಇದ್ದೇ ಇರುತ್ತದೆ. ಕಾರಣ ಇಲ್ಲದೆ ಒಂದು ಹುಲ್ಲುಕಡ್ಡಿಯೂ ಅಲ್ಲಾಡಲ್ಲ ಎನ್ನುವ ಮಾತೇ ಇದೆಯಲ್ಲ. ಅದೇ ರೀತಿ ನನ್ನ ಕೈಯಲ್ಲಿ ಲೇಖನಿಯನ್ನು ಭದ್ರಪಡಿಸಿದ್ದು ಮುದ್ದಾಗಿದ್ದ ಒಬ್ಬಳು ನಾರಿ. ಹೆಣ್ಣಿಂದ ರಾಮಾಯಣ, ಮಹಾಭಾರತವೇ ನಡೆದುಹೋಗಿರುವಾಗ ನನ್ನದೇನು ಮಹಾ? ಕರ್ತೃ–ಕರ್ಮ ಎಲ್ಲ ಹೆಣ್ಣೇ ಆಗಿರುವಾಗ ನಾವು ಕ್ರಿಯಾಪದಗಳಷ್ಟೆ.

ದ್ವಿತೀಯ ಪಿಯುಸಿಯಲ್ಲಿದ್ದಾಗ... (ಬೇಜಾರು ಮಾಡ್ಕೊಳ್ಬೇಡಿ. ವ್ಯವಕಲನ ಮಾಡಿದ ನೆನಪಿನ ಸುರುಳಿ ಇದು) ನಮ್ಮ ತರಗತಿಯ ಹುಡುಗಿಯ ಬಗ್ಗೆ ಒಂದು ಪ್ರೇಮಕಥೆ ಬರೆದಿದ್ದೆ: ನಾನೇ ನಾಯಕ, ಅವಳೇ ನಾಯಕಿ. ಅದು ಅವಳ ಕೈಗೆ ಸಿಕ್ಕಿ ಆರತಿಯನ್ನೂ ಎತ್ತಿಸಿಕೊಂಡೆ. ಸುಳ್ಳು ಹೇಳಬಾರದು ಅಂದರೆ, ನಾನೇ ಕಥೆಯನ್ನು ಅವಳ ಕೈಗೆ ಸಿಗುವಂತೆ ಮಾಡಿದ್ದಾಗಿತ್ತು. ನನ್ನ ಬಗ್ಗೆ ಒಂದು 'ಮಧುರ' ಭಾವನೆ ಚಿಗುರಲಿ ಎಂದು. ನನ್ನ ದುರದೃಷ್ಟ. ಅವಳಿಗೆ ಕಥೆಗಳನ್ನು ಓದುವ ಅಭಿರುಚಿ ಇರಲಿಲ್ಲ ಅಂತ ಕಾಣುತ್ತದೆ. 'ಕಥೆ ಬರೆಯುವ ಮುಸುಡಿಯಾ ಇದು?' ಎಂದೆನ್ನುತ್ತ ಅವಳು ಅಂದು ಹೇಳಿದ ಮಾತುಗಳನ್ನೆಲ್ಲ ಈಗಲೂ ಚಳಿಯಾದಾಗಲೆಲ್ಲ ನೆನಪಿಸಿಕೊಂಡು ಬೆವರುತ್ತೇನೆ. ಆ ಅವಮಾನವನ್ನು ಸಹಿಸಲಾರದೆ ಕೈಯಲ್ಲಿ ಲೇಖನಿ ಹಿಡಿದೆ. ಓದು ನಿಂತ ನೀರಾಯಿತು. ಅಪ್ಪ ತುಟಿ ಬಿಚ್ಚಲಿಲ್ಲ, ಅಮ್ಮ ತುಟಿ ಮುಚ್ಚಲಿಲ್ಲ. ಅವರಿಗೆ ಒಂದೇ ಚಿಂತೆ: ನನ್ನ ಮದುವೆಯ ಬಗ್ಗೆ!

ಓದದೆ ಇದ್ರೆ ಹೆಣ್ಣು ಸಿಗಲ್ಲ ನೋಡು ಎನ್ನುವ ಅಮ್ಮನ ಮಾತು ಉಪ್ಪು ತಿನ್ನದೆ ಇದ್ದರೆ ನೀರು ಕುಡಿಯಲು ಆಗಲ್ಲ ಅನ್ನುವಂತಾಗಿತ್ತು. ಪಿಯುಸಿ ಓದಿದವನಿಗೆ ಹೆಣ್ಣು ಸಿಗುವುದು ಎಷ್ಟು ಕಷ್ಟ ಅನ್ನುವ ತಮ್ಮ ವಾದವನ್ನು ಸಾಕ್ಷಿ ಸಹಿತ ಮಂಡಿಸಿದ್ದರಿಂದ ನನಗೂ ಒಂಚೂರು... ಹೌದು, ಸ್ವಲ್ಪ ಜಾಸ್ತಿನೇ ಭಯವಾಯಿತು. ಮದುವೆಗೆ ಬೇಕಾದ ಅರ್ಹತೆಗಳಲ್ಲಿ ಒಂದಾದ ಡಿಗ್ರಿಯನ್ನು ಪಡೆಯೋಣ ಅಂತ ಬಿ.ಎಸ್ಸಿ.ಗೆ ಸೇರಿದೆ. ಆದರೆ ಮನಸ್ಸು ಮೆದುಳಿನ ತರ್ಕದ ಮಾತನ್ನು ಕೇಳಲು ಸಿದ್ಧವಿರಲಿಲ್ಲ. ಬರವಣಿಗೆಯ ಚಟ ಹಿಡಿದಿತ್ತು. ಕಾಲು ಮನೆಯ ದಾರಿಯನ್ನು ಹಿಡಿದಿತ್ತು.

ಈ ವರ್ಷ ಕಳೆಯುವುದರೊಳಗೆ ಮದುವೆ ಮಾಡಿಸಿ, ಮುಂದಿನ ವರ್ಷ ಮುಗಿಯುವುದರೊಳಗೆ ಮೊಮ್ಮಕ್ಕಳೊಂದಿಗೆ ಆಟ ಆಡ್ತಿರ್ತೀನಿ ಅನ್ನೋ ಅಮ್ಮನ ಆತ್ಮವಿಶ್ವಾಸವನ್ನು ಕಂಡಾಗ ನನಗೂ ಖುಷಿಯಾಗುತ್ತದೆ. ಯಾಕೆಂದರೆ ಅವರು ಮನಸ್ಸಿನಲ್ಲಿ ಏನನ್ನಾದರು ಅಂದುಕೊಂಡರೆ ಸಾಧಿಸಿಯೇ ತೀರುವ ಜಾಯಮಾನದವರು. ಹೀಗಾಗಿ, ಸಹಜವಾಗಿ ನಾನು ನನ್ನ ಆನಂದಕ್ಕೆ ಪಾರವನ್ನೇ ಕಟ್ಟಿಕೊಂಡಿಲ್ಲ. ಹಾಗಂತ ವೃತ್ತಿಯನ್ನು ಮರೆಯೋಕಾಗತ್ತ? ಒಂದು ಒಳ್ಳೆಯ ಕಾದಂಬರಿಯನ್ನು ವರ್ಷ ಕಳೆಯುವುದರೊಳಗೆ ಬರೆಯಬೇಕು ಅಂತ ಪಣ ತೊಟ್ಟಿದ್ದೇನೆ. ಅಮ್ಮ ಹುಡುಗಿಯ ಹುಡುಕಾಟದಲ್ಲಿದ್ದರೆ ನಾನು ಕಥೆಯ ಹುಡುಕಾಟದಲ್ಲಿದ್ದೇನೆ. ಅಮ್ಮ ದಿನವೂ ಹುಡುಗಿಯರ ಭಾವಚಿತ್ರಗಳನ್ನು ತರೋಳು. ನನಗೂ ನೋಡಿ ನೋಡಿ, ಹುಡುಗಿಯರ ಬೇಡಿಕೆಗಳನ್ನು ಕೇಳಿ ಕೇಳಿ ಬೇಜಾರಾಗಿಹೋಗಿದೆ. ಒಂದು ಕಾಲದಲ್ಲಿ ಹೆಣ್ಣನ್ನು ಹೆತ್ತವರು ತುಳಿಸಿಕೊಂಡರು. ಈಗ ನಮ್ಮನ್ನು ಹೆತ್ತವರು ತುಳಿಸಿಕೊಳ್ಳುತ್ತಿದ್ದಾರೆ. ನಿಶ್ವಾಸಕ್ಕೆ ಭಾರವನ್ನು ಸೇರಿಸುವುದನ್ನು ಬಿಟ್ಟು ಮತ್ತೇನೂ ಮಾಡಲು ಸಾಧ್ಯವಿಲ್ಲ. ಆದರೆ ಭಗೀರಥನ ಅಪರಾವತಾರವಾದ ಅಮ್ಮ ಬಿಡಬೇಕಲ್ಲ. ಕೆಲವೊಮ್ಮೆ ಹುಡುಗಿಯ ಫೋಟೊಗೆ ಮನಸೋತು ಸಂಬಂಧವನ್ನು ನಾನು ಒಪ್ಪಿಕೊಂಡರೂ ಹುಡುಗಿಯ ಕಡೆಯಿಂದ ಕೆಂಪುದೀಪ. ಕಾರಣ: ಹುಡುಗ ಕಡಿಮೆ ಓದಿದ್ದಾನೆ. ಮತ್ತೆ ಮನೆಯಲ್ಲಿದ್ದಾನೆ!

ಟಕ್... ಟಕ್...

ಅಮ್ಮ ಬಾಗಿಲು ತಟ್ಟುತ್ತಿದ್ದಾರೆ. ಪರಿಚಯ ಇಷ್ಟು ಸಾಕು. ಕಥೆ ಶುರುಮಾಡೋಣ.

'ಒಳಗೆ ಬಾರಮ್ಮ', ಕರೆದೆ. ಮುಖದಲ್ಲಿ ಸಾವಿರ ವೋಲ್ಟಿನ ನಗುವಿನೊಂದಿಗೆ ಬಾಗಿಲು ತಳ್ಳುತ್ತ ಒಳಬಂದ ಅಮ್ಮನ ಕೈಯಲ್ಲಿ ಭಾವಚಿತ್ರವೊಂದಿತ್ತು. ಹೆಸರು ಫಾಲ್ಗುಣಿ ಅಂತ. ಕನ್ನಡ ಶಿಕ್ಷಕಿ. ಎಷ್ಟು ಚೆಂದ ಇದ್ದಾಳೆ ನೋಡೋ' – ಯಾವ ಮದುವೆ ಬ್ರೋಕರ್‌ಗೂ ಕಡಿಮೆ ಇಲ್ಲದಂತೆ ಉಸುರಿದರು. ಭಾವಚಿತ್ರ ನನ್ನ ಕೈ ತಲುಪಿತ್ತು.

ಭಾವಚಿತ್ರವನ್ನು ನೋಡದೆ ಅಮ್ಮನ ಕೈಗೆ ಕೊಟ್ಟು ಬೇಸರದಿಂದ, 'ನನಗೆ ಈಗಲೇ ಮದುವೆ ಮಾಡಿಕೊಳ್ಳಲು ಇಷ್ಟ ಇಲ್ಲ. ಒತ್ತಾಯ ಮಾಡಬೇಡಿ' ಎಂದು ಒಳಗೆ ಆಸೆ ಇದ್ದರೂ ತೋರಿಸಿಕೊಳ್ಳಬಾರೆಂದು ಹೇಳಿದೆ.

'ಮತ್ಯಾವಾಗ ಮದುವೆ ಆಗ್ತೀಯ? ತುಂಬಾ ತಡವಾದರೆ...' ಎನ್ನುತ್ತ ಅಮ್ಮ ಆಚೀಚೆ ನೋಡತೊಡಗಿದರು.

'ಆದರೆ ಏನು?' ಪ್ರತಿಸವಾಲನ್ನು ಹಾಕಿದೆ. ಅಮ್ಮ ಒಂದು ಕ್ಷಣ ತಡೆದು ಮುಜುಗರಪಟ್ಟುಕೊಳ್ಳುತ್ತ, 'ಮಕ್ಕಳು ಆಗುವುದರಲ್ಲಿ ತೊಂದರೆಯಾಗುತ್ತದೆಯಂತೆ' ಎಂದರು.

'ಯಾರು, ಆ ಸೈಂಟಿಸ್ಟ್ ಪೂರ್ಣಿ ಹೇಳಿದ್ಳಾ?'

ನನಗೆ ಗೊತ್ತಾಗಿತ್ತು, ಇದೆಲ್ಲ ಕಿತಾಪತಿ ತಂಗಿಯದೇ ಎಂದು. ಹೌದು–ಇಲ್ಲ ಎರಡೂ ಅನ್ನುವಂತೆ ಅಮ್ಮ ತಲೆಯಲ್ಲಾಡಿಸಿದರು. ನಾನು ನಗುತ್ತ, 'ತಡವಾಗಿ ಮದುವೆಯಾದರೆ ಬುದ್ಧಿವಂತ ಮಕ್ಕಳು ಹುಟ್ಟುತ್ತಾರೆ. ಯಾಕೆ ಹೇಳು?' ಕೇಳಿದೆ. ಗಣಿತದ ಸಮಸ್ಯೆಯೇನೋ ಅನ್ನುವಂತೆ ಅಮ್ಮ ಮುಖ ಮಾಡಿದರು. 'ಯಾಕೆಂದರೆ ನಾವು ಪ್ರಬುದ್ಧರಾಗಿರುತ್ತೇವಲ್ಲ.' ನಗುತ್ತಾ ಸಮಜಾಯಿಷಿ ನೀಡಿದರೂ ಪೂರ್ಣಿಮಾ ಹೊಸದೊಂದು ಹುಳವನ್ನು ತಲೆಯೊಳಗೆ ಇಳಿಸಿದ್ದಳು. 'ಇರಬಹುದಾ?' ಮನಸ್ಸು ಅಳುಕಿತು.

ಅಮ್ಮ ನನ್ನ ಪಕ್ಕದಲ್ಲಿ ಬಂದು ಕುಳಿತುಕೊಂಡು, 'ಹುಡುಗಿಯ ಮನೆಯಲ್ಲಿ ತುಂಬಾ ಬಡತನವಿದೆ. ಮದುವೆಯಾದ ಮೇಲೂ ಸಂಬಳವನ್ನು ತವರಿಗೆ ಕಳಿಸಲು ಒಪ್ಪಿಕೊಳ್ಳುವ ಹುಡುಗನಿಗೆ ಮದುವೆ ಮಾಡಿಕೊಡುತ್ತಾರಂತೆ. ನಾವು ಅದಕ್ಕೆ ಒಪ್ಪಿಕೊಂಡ್ವಿ. ಮುಂದಿನವಾರ... ಒಂದುಕ್ಷಣ ಅನುಮಾನಿಸಿ, ನಿಶ್ಚಿತಾರ್ಥ ಇಟ್ಕೊಂಡಿದ್ದೀವಿ' ಎಂದರು ಅಳುಕುತ್ತ.

'ನನ್ನ ಒಂದು ಮಾತೂ ಕೇಳದೆ ನಿಶ್ಚಿತಾರ್ಥನಾ?' ಸುಮ್ಮನೆ ಮಾತಿಗೆ ಹೇಳಿದೆ. ಮನಸ್ಸಿಗಾಗಲೇ ರೆಕ್ಕೆ ಬಂದಿತ್ತು. ಅಂತೂ ಹುಡುಗಿಯೊಬ್ಬಳು ಈ ಬಡಪಾಯಿಯನ್ನು ಒಪ್ಪಿಕೊಂಡಳಲ್ಲ.

ಅಮ್ಮ ಕಣ್ಣೀರಿಗೆ ಅಣೆಕಟ್ಟು ಕಟ್ಟಿಕೊಳ್ಳುತ್ತ, 'ಹಾಗಲ್ಲಪ್ಪ. ನಿನ್ನ ಬಯೋಡೇಟಾಕ್ಕೆ ಹೆಣ್ಣು ಸಿಗೋದು ಎಷ್ಟು ಕಷ್ಟ ಅಂತ ಗೊತ್ತಲ್ಲ. ಅಲ್ಲದೆ ಅವರು ಅವಸರ ಮಾಡ್ತಿದ್ದಾರೆ. ನಮಗೂ...' ಬಾಯಿಯ ತುದಿಗೆ ಬಂದ ಮಾತನ್ನು ಒಳಗೆ ತಳ್ಳಿ, '... ಅವರಿಗೆ ಇನ್ನೂ ಇಬ್ಬರು ಹೆಣ್ಣುಮಕ್ಕಳ ಮದುವೆ ಮಾಡಬೇಕು. ನಿನಗೆ ಇಷ್ಟವಿಲ್ಲದಿದ್ದರೆ ಬೇಡ ಬಿಡು' ಎಂದು ಎದ್ದು ಹೊರಡಲು ಅನುವಾದರು. ಸುಮ್ಮನಿದ್ದರೆ ಪರಿಸ್ಥಿತಿ ಮಿಂಚಿಹೋಗುತ್ತದೆಂದು, 'ಅಮ್ಮಾ' ಎಂದು ಕೂಗಿದೆ. ಮನಸ್ಸಿನ ಆತಂಕ ಬಹುಶಃ ಧ್ವನಿಯಾಗಿ ಪರಿವರ್ತನೆಯಾಗಿತ್ತು.